# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008

**ಸಂಖ್ಯೆ:ದಾವಿ:ಶೈಕ್ಷಣಿಕ/152/2022-23/2792** **ದಿನಾಂಕ:29.10.2022**

## :ಪ್ರವೇಶ ಪ್ರಕಟಣೆ:

**ವಿಷಯ:** **ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಕೋರ್ಸುಗಳು, ಎಂ.ವೋಕ್., ಪಿ.ಜಿ.ಡಿಪ್ಲೋಮಾ, ಬಿ.ವೋಕ್., ಡಿಪ್ಲೋಮಾ ಮತ್ತು ಸರ್ಟಿಫಿಕೆಟ್ ಕೋರ್ಸುಗಳಿಗೆ 2022-23ನೇ ಶೈಕ್ಷಣಿಕ ಸಾಲಿಗೆ 'ಆಫ್‌ಲೈನ್'ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.**

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27.10.2022.

*******

ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ, ಘಟಕ ಕಾಲೇಜು, ಸ್ವಾಯತ್ತ ಕಾಲೇಜುಗಳು ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿನ ವಿವಿಧ ಸ್ನಾತಕೋತ್ತರ ಪದವಿ ಕೋರ್ಸುಗಳು, ಎಂ.ವೋಕ್., ಪಿ.ಜಿ.ಡಿಪ್ಲೋಮಾ, ಬಿ.ವೋಕ್., ಡಿಪ್ಲೋಮೊ ಮತ್ತು ಸರ್ಟಿಫಿಕೆಟ್ ಕೋರ್ಸುಗಳಿಗೆ **2022-23ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಳಿಗೆ "ಆಫ್‌ಲೈನ್"** ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**I.ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ದಾವಣಗೆರೆ - ಇಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ವಿವರ:**

| ಕ್ರ.ಸಂ. | ನಿಕಾಯದ ಹೆಸರು | ವ್ಯಾಸಂಗ ವಿಷಯಗಳು |
|---|---|---|
| 1 | **ಕಲಾ** | **ಎಂ.ಎ:** ಕನ್ನಡ, ಇಂಗ್ಲೀಷ್, ಹಿಂದಿ ಮತ್ತು ಉರ್ದು<br>**ಎಂ.ಎ:** ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ವಿಭಾಗ, ಅರ್ಥಶಾಸ್ತ್ರ, ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ರಾಜ್ಯಶಾಸ್ತ್ರ, ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯು), ಸಮಾಜಶಾಸ್ತ್ರ.<br>**ಎಂ.ವಿ.ಎ:** ಮಾಸ್ಟರ್ ಆಫ್ ವಿಜುವಲ್ ಆರ್ಟ್ಸ್, ಎಂ.ವಿ.ಎ.(ಇನ್ ಅಪ್ಲೈಡ್ ಆರ್ಟ್ & ಪೈಂಟಿಂಗ್) |
| 2 | **ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ** | ಎಂ.ಕಾಂ.<br>ಎಂ.ಬಿ.ಎ.(ಪ್ರವೇಶಾತಿಯು ಪಿ.ಜಿ.ಸಿ.ಇ.ಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಭರ್ತಿಯಾಗದ ಸೀಟುಗಳಿಗೆ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ) |
| 3 | **ಶಿಕ್ಷಣ** | ಎಂ.ಇಡಿ., ಎಂ.ಪಿ.ಇಡಿ., ಬಿ.ಪಿ.ಇಡಿ. |
| 4 | **ವಿಜ್ಞಾನ ಮತ್ತು ತಂತ್ರಜ್ಞಾನ** | **ಎಂ.ಎಸ್ಸಿ:** ಜೀವರಸಾಯನಶಾಸ್ತ್ರ, ಫ್ಯಾಷನ್ ಟೆಕ್ನಾಲಜಿ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕಯಂತ್ರ ವಿಜ್ಞಾನ, ಪರಿಸರ ವಿಜ್ಞಾನ, ಆಹಾರ ತಂತ್ರಜ್ಞಾನ, ಗಣಿತಶಾಸ್ತ್ರ, ಸೂಕ್ಷ್ಮಾಣುಜೀವಶಾಸ್ತ್ರ, ಭೌತಶಾಸ್ತ್ರ, ಯೋಗ ವಿಜ್ಞಾನ, ಪ್ರಾಣಿಶಾಸ್ತ್ರ. |
| 5 | **ಎಂ.ವೋಕ್/ಪಿ.ಜಿ. ಡಿಪ್ಲೋಮಾ/ಬಿ.ವೋಕ್/ ಡಿಪ್ಲೋಮಾ/ ಸರ್ಟಿಫಿಕೆಟ್ ಕೋರ್ಸ್‌ಗಳು** | 1. ಎಂ.ವೋಕ್ ಇನ್ ಸೈಬರ್ ಸೆಕ್ಯೂರಿಟಿ (ಗಣಕ ವಿಜ್ಞಾನ ಅಧ್ಯಯನ ವಿಭಾಗ)<br>2. ಪಿ.ಜಿ. ಡಿಪ್ಲೋಮಾ ಇನ್ ಸೈಬರ್ ಸೆಕ್ಯೂರಿಟಿ (ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ಅಧ್ಯಯನ ವಿಭಾಗ)<br>3. ಪಿ.ಜಿ. ಡಿಪ್ಲೋಮಾ ಇನ್ ಫೈನಾನ್ಸಿಯಲ್ ಸರ್ವೀಸ್ (ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ)<br>4. ಪಿ.ಜಿ. ಡಿಪ್ಲೋಮ ಇನ್ ಡೇಟಾ ಎನಾಲ್ಸಿಸ್ (ಅರ್ಥಶಾಸ್ತ್ರ ಅಧ್ಯಯನ ವಿಭಾಗ)<br>5. ಪಿ.ಜಿ. ಡಿಪ್ಲೋಮಾ ಇನ್ ಕ್ಲಿನಿಕಲ್ ಡಯಟಿಕ್ಸ್ & ಅಪ್ಲೈಡ್ ನ್ಯೂಟ್ರಿಷನ್ (ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ)<br>6. ಪಿ.ಜಿ. ಡಿಪ್ಲೋಮಾ ಇನ್ ಡಿಜಿಟಲ್ ಮೀಡಿಯಾ (ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ ಅಧ್ಯಯನ ವಿಭಾಗ)<br>7. ಪಿ.ಜಿ. ಡಿಪ್ಲೋಮಾ ಇನ್ ಫುಡ್ ಪ್ರೊಸೆಸಿಂಗ್, ಸೇಫ್ಟಿ ಅಂಡ್ ಕ್ವಾಲಿಟಿ ಮ್ಯಾನೇಜ್‌ಮೆಂಟ್ (ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ)<br>8. ಬಿ.ವೋಕ್ ಇನ್ ರಿಟೇಲ್ ಮ್ಯಾನೇಜ್‌ಮೆಂಟ್ ಅಂಡ್ ಇನ್‌ಫಾರ್ಮೇಷನ್ ಟೆಕಾಲ್ನಜಿ (ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ)<br>9. ಡಿಪ್ಲೋಮಾ ಇನ್ ಡಿಜಿಟಲ್ ಆರ್ಟ್ (ದೃಶ್ಯಕಲಾ ಕಾಲೇಜು, ದಾವಣಗೆರೆ)<br>10. ಡಿಪ್ಲೋಮ ಇನ್ ಯೋಗ ವಿಜ್ಞಾನ (ಯೋಗ ವಿಜ್ಞಾನ ಅಧ್ಯಯನ ವಿಭಾಗ)<br>11. ಯೋಗ ವಿಜ್ಞಾನದ ಮೂರು ತಿಂಗಳ ಸರ್ಟಿಫಿಕೆಟ್ ಕೋರ್ಸ್ (ಯೋಗ ವಿಜ್ಞಾನ ಅಧ್ಯಯನ ವಿಭಾಗ) |

## II. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ, ಚಿತ್ರದುರ್ಗ–ಇಲ್ಲಿರುವ ಸ್ನಾತಕೋತ್ತರ ವಿಷಯಗಳು

| ಕ್ರ.ಸಂ. | ನಿಕಾಯದ ಹೆಸರು | ವ್ಯಾಸಂಗ ವಿಷಯಗಳು |
|---|---|---|
| 1 | ಕಲಾ | ಎಂ.ಎ: ಕನ್ನಡ, ಇಂಗ್ಲೀಷ್, ಅರ್ಥಶಾಸ್ತ್ರ, ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ) |
| 2 | ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ | ಎಂ.ಕಾಂ. |
| 3 | ವಿಜ್ಞಾನ ಮತ್ತು ತಂತ್ರಜ್ಞಾನ | ಎಂ.ಎಸ್ಸಿ: ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕಯಂತ್ರ ವಿಜ್ಞಾನ, ಗಣಿತಶಾಸ್ತ್ರ, ಭೌತಶಾಸ್ತ್ರ, ಪ್ರಾಣಿಶಾಸ್ತ್ರ. |

## III. ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ನಡೆಸುತ್ತಿರುವ ಸ್ನಾತಕೋತ್ತರ ಕೋರ್ಸ್‌ಗಳ ವಿವರ:

| ಕ್ರ. ಸಂ. | ಕಾಲೇಜಿನ ಹೆಸರು | ವ್ಯಾಸಂಗ ವಿಷಯಗಳು |
|---|---|---|
| | **ದಾವಣಗೆರೆ ಜಿಲ್ಲೆ** | |
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಎಂ.ಎ:: ಕನ್ನಡ, ಇಂಗ್ಲೀಷ್.<br>ಎಂ.ಕಾಂ.<br>ಎಂ.ಬಿ.ಎ. (ಪಿ.ಜಿ.ಸಿಇಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಭರ್ತಿಯಾಗದ ಸೀಟುಗಳಿಗೆ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ) |
| 2 | ಶ್ರೀ ಶ್ರೀ ಶಿವಲಿಂಗೇಶ್ವರಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ. | ಎಂ.ಎ: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ.<br>ಎಂ.ಕಾಂ. |
| 3 | ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಎಂ.ಕಾಂ. |
| 4 | ಎ.ಆರ್.ಜಿ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | ಎಂ.ಕಾಂ. |
| 5 | ಎಸ್.ಬಿ.ಸಿ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ದಾವಣಗೆರೆ. | ಎಂ.ಎ: ಇಂಗ್ಲೀಷ್; ಅರ್ಥಶಾಸ್ತ್ರ<br>ಎಂ.ಕಾಂ. |
| 6 | ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ, ದಾವಣಗೆರೆ | ಎಂ.ಬಿ.ಎ. (ಪಿ.ಜಿ.ಸಿ.ಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಭರ್ತಿಯಾಗದ ಸೀಟುಗಳಿಗೆ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ) |
| 7 | ಭದ್ರಾ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಇನ್‌ಫಾರ್ಮೇಷನ್ ಸ್ಟಡೀಸ್, ದಾವಣಗೆರೆ. | ಎಂ.ಕಾಂ. |
| 8 | ಎಸ್.ಜೆ.ವಿ.ಪಿ. ಕಾಲೇಜು, ಹರಿಹರ. | ಎಂ.ಎ. ಕನ್ನಡ.<br>ಎಂ.ಕಾಂ. |
| 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿ. | ಎಂ.ಎ.: ಕನ್ನಡ, ಇತಿಹಾಸ ಮತ್ತು ಪ್ರಾಕಾನಶಾಸ್ತ್ರ<br>ಎಂ.ಕಾಂ.<br>ಎಂ.ಎಸ್ಸಿ. ಗಣಿತಶಾಸ್ತ್ರ. |
| | **ಚಿತ್ರದುರ್ಗ ಜಿಲ್ಲೆ** | |
| 10 | ಸರ್ಕಾರಿ ಕಲಾ ಕಾಲೇಜು, (ಸ್ವಾಯತ್ತ) ಚಿತ್ರದುರ್ಗ. | ಎಂ.ಎ: ಕನ್ನಡ, ಇಂಗ್ಲೀಷ್. ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ. ಸಮಾಜಶಾಸ್ತ್ರ.<br>ಎಂ.ಕಾಂ. |
| 11 | ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ. | ಎಂ.ಎಸ್ಸಿ- ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರ; |
| 12 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ. | ಎಂ.ಎ: ಕನ್ನಡ; ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ.<br>ಎಂ.ಕಾಂ. |
| 13 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. | ಎಂ.ಎ: ಕನ್ನಡ, ಸಮಾಜಶಾಸ್ತ್ರ<br>ಎಂ.ಕಾಂ. |
| 14 | ಶ್ರೀಮತಿ ಯಶೋಧರಮ್ಮ ಬೋರಪ್ಪ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ | ಎಂ.ಎ: ಇಂಗ್ಲೀಷ್ |

| ಕ್ರ. ಸಂ. | ಶುಲ್ಕ ವಿವರಗಳು | ಸಾಮಾನ್ಯ/ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ | ಪ.ಜಾ/ಪ.ಪಂ/ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ | ಪಾವತಿಸುವ ವಿಧಾನ |
|---|---|---|---|---|
| 1 | ಅರ್ಜಿಗಳ ಪರಿಶೀಲನೆ ಮತ್ತು ಪ್ರವೇಶ ಪರೀಕ್ಷಾ ಶುಲ್ಕ | ರೂ.1000/- | ರೂ.500/- | ಶುಲ್ಕ ಪಾವತಿಯನ್ನು ಚಲನ್ ಮೂಲಕ (ಆಫ್‌ಲೈನ್) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಖಾತೆ ಸಂಖ್ಯೆ:64050447113 (IFSC Code:SBIN0040869)ಗೆ ಸಂದಾಯವಾಗುವಂತೆ ಪಾವತಿಸಬಹುದು ಅಥವಾ ಹಣಕಾಸು ಅಧಿಕಾರಿಗಳು, ಶಿವಗಂಗೋತ್ರಿ – ಇವರ ಹೆಸರಿನಲ್ಲಿ ಡಿಡಿ ಮೂಲಕ ಪಾವತಿಸುವುದು. |
| 2 | ಹೆಚ್ಚುವರಿ ಕೋರ್ಸುಗಳಿಗಾಗಿ | ರೂ.1000/- | ರೂ.500/- | |

ಅರ್ಹ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್:www.davangereuniversity.ac.in ಮೂಲಕ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ **ದಿನಾಂಕ:31.10.2022 ರಿಂದ ದಿನಾಂಕ:18.11.2022ರೊಳಗಾಗಿ** ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

**ಮುಖ್ಯ ಸೂಚನೆ:** ಸ್ನಾತಕೋತ್ತರ ಪದವಿ, ಎಂ.ವೋಕ್, ಪಿ.ಜಿ. ಡಿಪ್ಲೋಮಾ, ಬಿ.ವೋಕ್, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳ ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ಪ್ರವೇಶಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್(www.davangereuniversity.ac.in)ನಲ್ಲಿ ಪಡೆಯಬಹುದಾಗಿದೆ. ದೈನಂದಿನ ಅಥವಾ ಹೆಚ್ಚುವರಿ ಮಾಹಿತಿಗಾಗಿ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ಆಗಾಗ್ಗೆ ನಿಯಮಿತವಾಗಿ ಸಂಪರ್ಕಿಸಬಹುದಾಗಿದೆ. ಈ ಸಂಬಂಧ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಯಾವುದೇ ಮಾಹಿತಿಯನ್ನು ರವಾನಿಸಲಾಗುವುದಿಲ್ಲ.

## IV. ಅರ್ಜಿಗಳೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪ್ರತಿಗಳ ವಿವರಗಳು:

1. ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ ಪ್ರತಿ.
2. ಪದವಿ ಅಂಕಪಟ್ಟಿಗಳು (ಎಲ್ಲಾ ವರ್ಷಗಳ ಮತ್ತು ಎಲ್ಲಾ ಸೆಮಿಸ್ಟರ್‌ಗಳ ಪ್ರತಿಗಳು)
3. ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಪ್ರತಿಗಳು.
4. ಆಧಾರ್ ಕಾರ್ಡ್ ಪ್ರತಿ.
5. ಮೀಸಲಾತಿ/ವಿಕಲಾಂಗ/ಕ್ರೀಡಾ/ರಾ.ಸೆ.ಯೋ./ಎನ್.ಸಿ.ಸಿ./ರೇಂಜರ್ಸ್ ಮತ್ತು ರೋವರ್ಸ್/ಮಾಜಿ ಸೈನಿಕರ ಅವಲಂಭಿತರು, ಹೆಚ್.ಕೆ-371(ಜೆ)/ಕನ್ನಡ ಮಾಧ್ಯಮ/ಹುತಾತ್ಮ ರೈತರ ಮಕ್ಕಳು ಇತ್ಯಾದಿ, ಕುರಿತು ಸಂಬಂಧಪಟ್ಟ ಅಧಿಕೃತ ಅಧಿಕಾರಿಗಳಿಂದ ನೀಡಲ್ಪಟ್ಟ ದಾಖಲೆಗಳ ಪ್ರತಿ.

## V. ಸ್ನಾತಕೊತ್ತರ/ಡಿಪ್ಲೋಮಾ ಪ್ರವೇಶಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ಸಾಮಾನ್ಯ ಮಾರ್ಗಸೂಚಿಗಳು:

1. ಅರ್ಹ ಅಭ್ಯರ್ಥಿಗಳು ವಿವಿಧ ಸ್ನಾತಕೋತ್ತರ ಪದವಿ, ಎಂ.ವೋಕ್, ಪಿ.ಜಿ. ಡಿಪ್ಲೋಮಾ, ಬಿ.ವೋಕ್, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳ ಪ್ರವೇಶಾತಿಗೆ ಅರ್ಜಿಗಳನ್ನು ಕಂಡಿಕೆ (IV) ರಲ್ಲಿ ತಿಳಿಸಿರುವ ಅಧಿಕೃತ ದಾಖಲಾತಿಗಳ ಪ್ರತಿಗಳೊಂದಿಗೆ **ದಿನಾಂಕ:31.10.2022 ರಿಂದ 18.11.2022ರೊಳಗೆ** ಆಫ್‌ಲೈನ್ ಮೂಲಕ ವಿಶ್ವವಿದ್ಯಾನಿಲಯಕ್ಕೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
2. ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿಗಳಿಗೆ (ವಿವಿಧ ಸ್ನಾತಕೋತ್ತರ ಕೋರ್ಸುಗಳು/ ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜು/ಸ್ವಾಯತ್ತ ಕಾಲೇಜು/ಸಂಲಗ್ನಗೊಂಡ ಕಾಲೇಜುಗಳು) ಪ್ರವೇಶಾತಿ ಬಯಸುವ ಅರ್ಹ ಅಭ್ಯರ್ಥಿಗಳು **'ವಿಷಯವಾರು ಪ್ರತ್ಯೇಕ'** ಅರ್ಜಿಯನ್ನು ಸಲ್ಲಿಸತಕ್ಕದ್ದು. ಪ್ರತಿ ಕೋರ್ಸಿಗೂ ಪ್ರತ್ಯೇಕ ಅರ್ಜಿ ಶುಲ್ಕ ಮತ್ತು ಪ್ರವೇಶ ಪರೀಕ್ಷಾ ಶುಲ್ಕಗಳನ್ನು ಪಾವತಿಸತಕ್ಕದ್ದು.

3. ಸ್ನಾತಕ ಪದವಿಯ ಅಂತಿಮ ವರ್ಷದ ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
4. ಅಂಚೆ ಮೂಲಕ ಅರ್ಜಿಗಳನ್ನು ಕಳುಹಿಸಿದ ಅಭ್ಯರ್ಥಿಗಳು ತಮ್ಮ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರವನ್ನು ಸಂಬಂಧಪಟ್ಟ ವಿಭಾಗದ ಕಛೇರಿಯಲ್ಲಿ ವೈಯುಕ್ತಿಕವಾಗಿ ಪ್ರವೇಶ ಪರೀಕ್ಷೆಯ ಮುನ್ನ ಪಡೆಯಬಹುದಾಗಿದೆ.

## ಪ್ರವೇಶ ಪರೀಕ್ಷೆ ವೇಳಾಪಟ್ಟಿ ಹಾಗೂ ಸಂದರ್ಶನ ಪ್ರಕ್ರಿಯೆಯ ವಿವರಗಳು

| ಕ್ರ.ಸಂ. | ವಿವರಗಳು | ದಿನಾಂಕ |
|---|---|---|
| 1 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **18.11.2022** |
| 2 | ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿ: (ವಿಭಾಗವಾರು ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.davangereuniversity.ac.in)ನಲ್ಲಿ ಅಪ್‌ಲೋಡ್ ಮಾಡಲಾಗುವುದು) | **21, 22 ಹಾಗೂ 23ನೇ ನವೆಂಬರ್, 2022** |
| 3 | ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರಕಟಣೆ | **28.11.2022** |
| **ಕೇಂದ್ರಿಕೃತ ಸಂದರ್ಶನ, ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಮತ್ತು ತರಗತಿಗಳ ಪ್ರಾರಂಭ:** | | |
| 4 | ಮೆರಿಟ್ ಮತ್ತು ಸ್ಪೆಷಲ್ ಕ್ಯಾಟಗರಿ | **30.11.2022** |
| 5 | ಓಪನ್ ಮೆರಿಟ್ ಕ್ಯಾಟಗರಿ | **01.12.2022** |
| 6 | ತರಗತಿಗಳ ಪ್ರಾರಂಭ | **05.12.2022** |

1. ಅಭ್ಯರ್ಥಿಗಳು ಅರ್ಜಿಗಳೊಂದಿಗೆ ಅಧಿಕೃತ ದಾಖಲೆಗಳ ಪ್ರತಿಗಳನ್ನು ಒದಗಿಸದಿದ್ದಲ್ಲಿ, ನಿಗದಿತ ಶುಲ್ಕವನ್ನು ಸೂಕ್ತ ಸಮಯದಲ್ಲಿ ಪಾವತಿ ಮಾಡದಿದ್ದಲ್ಲಿ, ಅಥವಾ ಪ್ರವೇಶಾತಿ ಪ್ರಕ್ರಿಯೆಗಳಿಂದ ವಿದ್ಯಾರ್ಥಿಗಳು ನಿಗದಿತ ದಿನಾಂಕ ಮತ್ತು ಸಮಯದೊಳಗೆ ಸಂಬಂಧಪಟ್ಟ ವಿಭಾಗದಲ್ಲಿ ಹಾಜರಾಗದಿದ್ದಲ್ಲಿ, ವಿದ್ಯಾರ್ಥಿಗಳ ಪ್ರವೇಶಾತಿಯು ಸ್ವಯಂ ಚಾಲಿತವಾಗಿ ರದ್ದಾಗುತ್ತದೆ.
2. ಪ್ರವೇಶಾತಿ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸುವ ಅಧಿಕೃತ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ನಕಲಿ/ಕೊಟ್ಟಿ ಅಥವಾ ಅನಧಿಕೃತ ದಾಖಲಾತಿಗಳೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಪ್ರವೇಶಾತಿಗಳನ್ನು ರದ್ದುಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಗಳ ವಿರುದ್ಧ ಕಾನೂನು ರಿತ್ಯಾ ಕ್ರಮಕೈಗೊಳ್ಳಲಾಗುವುದು.
3. ವಿಶ್ವವಿದ್ಯಾನಿಲಯವು ಪ್ರವೇಶಾತಿ ಪಡೆದಿರುವ ಅಭ್ಯರ್ಥಿಗಳನ್ನು ಮುಖ್ಯಕೇಂದ್ರದಿಂದ (ಶಿವಗಂಗೋತ್ರಿ)– ಸ್ನಾತಕೋತ್ತರ ಕೇಂದ್ರ ಅಥವಾ ಸ್ವಾಯತ್ತ ಕಾಲೇಜು ಅಥವಾ ಸಂಲಗ್ನಗೊಂಡ ಕಾಲೇಜುಗಳಿಗೆ ವರ್ಗಾಯಿಸುವ ಅಧಿಕಾರವನ್ನು ಹೊಂದಿರುತ್ತದೆ. ಅಲ್ಲದೆ, ಯಾವುದೇ ಕೇಂದ್ರದಲ್ಲಿ ಯಾವುದೇ ವಿಷಯದಲ್ಲಿ ಪ್ರವೇಶಾತಿ ಪ್ರಮಾಣ ಕನಿಷ್ಠ 15 ಕ್ಕಿಂತ ಕಡಿಮೆ ಇದ್ದಲ್ಲಿ, ಕನಿಷ್ಠ ಪ್ರವೇಶಾತಿಯನ್ನು ಸರಿದೂಗಿಸುವ ಸಲುವಾಗಿ ವರ್ಗಾವಣೆ ಮಾಡಲಾಗುವುದು.
4. ಪ್ರವೇಶಾತಿ ಪ್ರಕ್ರಿಯೆ ಮುಗಿದ ನಂತರ ವಿದ್ಯಾರ್ಥಿಗಳಿಂದ ಭರಿಸಲಾದ ಯಾವುದೇ (ಅರ್ಜಿ ಶುಲ್ಕ, ಪ್ರವೇಶ ಪರೀಕ್ಷಾ ಶುಲ್ಕ, ನೋಂದಣಿ ಶುಲ್ಕ ಅಥವಾ ಇನ್ನಾವುದೇ ಶುಲ್ಕ) ಶುಲ್ಕಗಳನ್ನು ಮರಿಭರಿಕೆ ಮಾಡಲಾಗುವುದಿಲ್ಲ.
5. ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ತರಗತಿಗಳು ಪ್ರಾರಂಭವಾಗಲಿವೆ.
6. ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗಗಳ ಕಛೇರಿಗೆ ಸಲ್ಲಿಸಿದ ನಂತರ ಪ್ರವೇಶ ಪತ್ರವನ್ನು ತಪ್ಪದೇ ಪಡೆದುತಕ್ಕದ್ದು.

ಕುಲಸಚಿವರು.
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007